



‘ಮಹದೇವಸ್ವಾಮಿ ಅವರ ಮನದಾಳದಲ್ಲಿರುವ ಜನಪದ ಕತೆಗಳನ್ನು ಮುಂದಿನ ಪೀಳಿಗೆಯ ಯುವಜನರು ಕಲಿಯಬೇಕು. ಅದಕ್ಕಾಗಿ ಒಂದು ವೇದಿಕೆ ರಚನೆಯಾಗಬೇಕು. ಕರ್ನಾಟಕ ಜಾನಪದ ಅಕಾಡೆಮಿ, ಜಾನಪದ ವಿಶ್ವವಿದ್ಯಾಲಯ ಈ ಕೆಲಸವನ್ನು ಮಾಡಬೇಕು’ ಎಂದು ಜಾನಪದ ತಜ್ಞ ಕ್ಯಾತನಹಳ್ಳಿ ರಾಮಣ್ಣ ಹೇಳುತ್ತಾರೆ.

## ತಂತ್ರಜ್ಞಾನವೇ ಬಂಡವಾಳ

‘ಅನ್ಯಾಯಕಾರಿ ಬ್ರಹ್ಮ’ ಗೀತೆಯ ಮೂಲಕ ಮಹದೇವಸ್ವಾಮಿ ಅವರಿಗೆ ದೊರೆತಿರುವ ವರ್ಚಸ್ಸನ್ನು, ಅವರಿಗೆ ಆರ್ಥಿಕ ಅನುಕೂಲವಾಗಿ ಬದಲಾಯಿಸುವ ಪ್ರಯತ್ನಗಳೂ ನಡೆಯುತ್ತಿವೆ. ಮಹದೇವಸ್ವಾಮಿ ಅವರು ತಾವು ಹಾಡಿರುವ ಹಲವು ಜನಪದ ಕಥೆಗಳ ಹಕ್ಕುಗಳನ್ನು ಆಡಿಯೊ ಕಂಪನಿಗಳಿಗೆ ಮಾರಾಟ ಮಾಡಿಕೊಂಡಿದ್ದಾರೆ. ಬಡತನದ ಕಾರಣದಿಂದಾಗಿ ಅವರು ತಮ್ಮ ಜನಪದ ಭವ್ಯ ಭಂಡಾರದ ಹಕ್ಕು ಬಿಟ್ಟುಕೊಟ್ಟಿದ್ದಾರೆ. ‘ಅನ್ಯಾಯಕಾರಿ ಬ್ರಹ್ಮ’ ಗೀತೆ ವೈರಲ್ ಆಗುತ್ತಿದ್ದಂತೆ ಆಡಿಯೊ ಕಂಪನಿಗಳು ಜಾಲತಾಣಗಳಲ್ಲಿ ಮಹದೇವಸ್ವಾಮಿ ಅವರ ಮತ್ತಷ್ಟು ಗೀತೆಗಳನ್ನು ಹರಿಬಿಟ್ಟಿವೆ. ಅವುಗಳಿಗೆ ಬೇಡಿಕೆಯೂ ಹೆಚ್ಚಾಗಿದೆ. ಆದರೆ ಈ ಗೀತೆಗಳ ಜನಪ್ರಿಯತೆಯ ಯಾವುದೇ ಲಾಭ ಮಹದೇವಸ್ವಾಮಿ ಅವರಿಗೆ ಸಿಗುವುದಿಲ್ಲ.

‘ಕಥೆಗಳನ್ನು ಮಾರಾಟ ಮಾಡದಂತೆ ಹಿಂದೆಯೇ ತಿಳಿಸಿದ್ದೆ. ಆದರೆ ಆಗಿನ ಬಡತನದ ಪರಿಸ್ಥಿತಿಯಲ್ಲಿ ಎಲ್ಲವನ್ನೂ ಮಾರಾಟ ಮಾಡಿದರು. ಈಗ ಆ ಹಾಡುಗಳಿಗೆ ಬೇಡಿಕೆ ಇದೆ, ಅವುಗಳು ಆಡಿಯೊ ಕಂಪನಿಗಳ ಪಾಲಾಗಿವೆ. ಹೀಗಾಗಿ ಮುಂದೆ ನಾವೇ ಸ್ವಯಂ ಯೂಟ್ಯೂಬ್ ಚಾನೆಲ್ ತೆರೆದು, ಎಲ್ಲಾ ಕಥೆಗಳನ್ನು ಮತ್ತೆ ರೆಕಾರ್ಡಿಂಗ್ ಮಾಡುವ ನಿರ್ಧಾರಕ್ಕೆ ಬಂದಿದ್ದೇವೆ’ ಎಂದು ಮಹದೇವಸ್ವಾಮಿ ಅವರ ಸಹ ಕಲಾವಿದರೊಬ್ಬರು ‘ಸುಧಾ’ಕ್ಕೆ ತಿಳಿಸಿದರು. ಹೀಗಾದಲ್ಲಿ, ಮಹದೇವಸ್ವಾಮಿ ಅವರ ಎಲ್ಲ ಗೀತೆಗಳು ಒಂದೇ ವೇದಿಕೆಯಲ್ಲಿ ದೊರೆಯುವಂತಾಗುತ್ತದೆ ಹಾಗೂ ಕಲಾವಿದರಿಗೂ ಅನುಕೂಲವಾಗುತ್ತದೆ.

‘ಅನ್ಯಾಯಕಾರಿ ಬ್ರಹ್ಮ’ ಗೀತೆಯ ಯಶಸ್ಸನ್ನು ಜಾನಪದ ಲೋಕ ಒಂದು ಪಾಠದಂತೆ ಗಮನಿಸುವುದು ಅಗತ್ಯ. ಗೀತೆಗಳು ಮಾತ್ರವಲ್ಲ, ಎಲ್ಲ ಜನಪದ ಪ್ರಕಾರಗಳನ್ನೂ ಯುವ ತಲೆಮಾರಿಗೆ ಮುಟ್ಟಿಸಲು ತಂತ್ರಜ್ಞಾನವನ್ನು ಹೇಗೆ ಬಳಸಿಕೊಳ್ಳಬಹುದು ಎನ್ನುವುದಕ್ಕೆ ಈ ಗೀತೆಯ ಯಶಸ್ಸು ಉದಾಹರಣೆಯಂತಿದೆ. ಈವರೆಗೆ ಕಲಾ ಪ್ರಕಾರಗಳ ಸಂರಕ್ಷಣೆಗೆ ತಂತ್ರಜ್ಞಾನವನ್ನು ಬಳಸಿಕೊಳ್ಳಲಾಗುತ್ತಿತ್ತು. ಕಲೆಗಳ ಜನಪ್ರಿಯತೆಗೂ ತಂತ್ರಜ್ಞಾನವನ್ನು ಚಿಮ್ಮುಹಲಗೆಯನ್ನಾಗಿ ಬಳಸಿಕೊಳ್ಳುವ ಬಗ್ಗೆ ಯೋಚಿಸಲು ಇದು ಸಕಾಲ. ಎಲ್ಲರ ಕೈಗೂ ಮೊಬೈಲ್ ಬಂದಿರುವ ಕಾಲಘಟ್ಟ ಹಾಗೂ ಸಾಮಾಜಿಕ ಜಾಲತಾಣಗಳ ಜನಪ್ರಿಯತೆ — ಇವುಗಳ ಅನುಕೂಲ ಜನಪದಕ್ಕೆ ಯಾವ ರೀತಿ ಒದಗಿಬರಬಹುದು ಎನ್ನುವುದರ ಬಗ್ಗೆ ತಜ್ಞರು, ಜಾನಪದ ವಿದ್ಯಾರ್ಥಿಗಳು ಗಂಭೀರ ಚಿಂತನೆ ನಡೆಸಬೇಕಾಗಿದೆ.

ಪ್ರತಿಕ್ರಿಯಿಸಿ: feedback@sudha.co.in